

ಮಾರಲದಿನ್ನಿ ಬಳಿಯ ಮಸ್ಕಿ ಜಲಾಶಯ

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಇರ್ತದ. ಇಲ್ಲಾಂದ್ರ ಹುಳಿ ಆಗ್ತದಂತ ಮಿಳ್ಳಿಯೊಳಗ, ಗಿಂಡಿಯೊಳಗ ಆಗಿನ ಪೂರ್ತೆ ಮೊಸರು ಇರ್ತದ.

ರಾಯಚೂರು ಖುಷಿ ಅಂದ್ರ ಒಗ್ಗಣ್ಣೆ ಭಜಿ... ಅಲಲಲಾ... ಏನು ಕೇಳ್ತೆಪಾ... ಹೇಳಬಾರದು ಅಂದ್ಕೂಡಲೇ ಶುರುವಾಗ್ತದ ಚಿತ್ರಕಶಕ್ತಿಯ ವಿವರಣೆ. ಇಲ್ಲಿ ಮತ್ತ ಕಲಬುರ್ಗಿ, ಬೀದರಿನ ಕೆಲಭಾಗದಾಗ ಮಾತ್ರ ಚುರುಮುರಿ ಒಗ್ಗರ್ಣೆ ಮಾಡೂಮುಂದ ಹಾಲು ಹಾಕ್ತಾರ. ಆ್ಯಸಿಡಿಟಿ ಆಗಬಾರದು ಅಂತ ಹಿಂಗ ಮಾಡ್ತಾರಂತ. ಒಗ್ಗಣ್ಣೆ ಇದ್ಮ್ಯಾಲೆ ಭಜಿ ಇರಲಕ್ರ ಹೆಂಗಲೆ... ನಿನ್ನೌನ... ಬೇಶಿ ಮಿರ್ಚಿ ಭಜಿ ಮಾಡ್ರಿ. ಇಲ್ಲಾಂದ್ರ ಪುಗ್ಗಿಯನ ಬರಲಿ. ಪುಗ್ಗಿ ಅಂದ್ರ ಗೋಲು ಭಜಿ. ಬಿಸಿಬಿಸಿ ಪುಗ್ಗಿ ಬರಬೇಕು. ಹೆಂಗ ಹೊಗಿಯಾಡಬೇಕಂದ್ರ ಹೊರಗಿನ ಶಕಿ, ಹೊಟ್ಯಾಗ ಇಳದಂಗ ಆಗಬೇಕು. ಅಂತ ಹೇಳ್ಕೊಂತ ಪ್ಲೇಟು ಚಾಚಿದ್ರ, ಮಾಡೋರಿಗೆ ಬ್ಯಾಸರ ಇಲ್ಲಂದ್ರ ತಿನ್ನೋರಿಗೆ ಯಾಕಿರಬೇಕು ಅನ್ನೂಹಂಗ ತಿಂತಿದ್ವಿ. ಹೊಡ್ಡಿ ಮಗನ ಅಂತ ಕಾಕಾರು ಭೇಷ್ ಅಂದ್ರ



ಒಗ್ಗರಣೆ, ಮಿರ್ಚಿ ಬಜ್ಜಿ

ಮತ್ತಿಷ್ಟು ತಿನ್ನಾಕ ಹುರುಪ ಬರ್ತಿತ್ತು.ಎಷ್ಟಾದ್ವುಲೆ ಅಂತ ಪರಸ್ಪರ ಕೇಳ್ಕೊಂಡ್ರ ನಾಕು, ಐದು ಲೆಕ್ಕನೇ ಅಲ್ಲ. ಹತ್ರ ಹತ್ರ ಅರ್ಧ ಡಜನ್ ತಿಂದಾಗಲೇ ಲೆಕ್ಕ.

ನಮ್ಮೂರ ಬ್ಯಾಸಗಿ ಊಟಂದ್ರ ಬಿಸಿ ಜಾರಿ, ತಣ್ಣನೆಯ ನುಚ್ಚು. ಏಯ್ ತಮ್ಮಾ, ಝೂರಿ ಕುಡದು ನುಚ್ಚುಣ್ಣಲೇ... ಇಲ್ಲಾಂದ್ರ ನೀರಡಕಿಯಾಗಿನೇ ಸಾಯ್ತಿ ನೊಡು... ಬಾಯಿ ವಣಗ್ತದ. ಮ್ಯಾಲೆ ಸೊಲುಪ ನುಚ್ಚುಣ್ಣು ಅನ್ನುವ ಒತ್ತಾಯಕ್ಕೆ ತಾಟು ಒಡ್ಡಲೇಬೇಕು. ಒಂದು ಜಾಂಬ ನೀರು ಕೊಡಮ್ಮಾ ಅಂದ್ರ ಒಂದು ಲೋಟ ನೀರು ಕೊಡಬೇಕು. ವಾಟಗಾ ಚಾ, ಜಾಂಬು ನೀರು, ಗಂಗಾಳ ನುಚ್ಚು ಇವೆಲ್ಲ ಪ್ರಮಾಣನೂ ಹೌದು.

ತಾಟಿನಾಗ ವಾಲಾಡ್ಕೊಂಡ ಹರಡುವ ಜಾರಿಯನ್ನ (ತೆಳುವಾಗಿ, ತಟ್ಟೆಯೊಳು ತೇಲಾಡುವಂತೆ ಮಾಡುವ ಸಜ್ಜಿಗೆ) ಮೂರು ಬಟ್ಟಲೆ ಸವರಿ ತಿಂದು ತಾಟು ಸ್ವಚ್ಛೆ ಮಾಡ್ಕೊಬೇಕು.

ಹಂಗ ಸ್ವಚ್ಛೆ ಆದ ತಾಟಿನಾಗ ಜೋಳದ ನುಚ್ಚು ಚಂದ್ರಮನ್ಹಂಗ ಗುಂಡುಗುಂಡಗೆ ಹರಡ್ಕೊಂತದ. ಅದರ ಮ್ಯಾಲೆ ಬೆಳ್ಳಗ ಅಲ್ಲಿ ಅಂಗಳದಾಗ ಹರುವಿದ ದೋತ್ರದಷ್ಟೇ ಬೆಳ್ಳಂದು ಮಜ್ಗಿ ಹಾಕಿದ್ರ ಹಾಲಿನ ನದಿ ಚಂದ್ರಗ ಸೇರಾಕ ಹೊಂಟಂಗ ಕಾಣ್ತದ. ಸುರಕೊಂಡು ನುಚ್ಚು ಮಜ್ಗಿ ಉಂಡಮ್ಯಾಲೆ ನಿದಿರಾದೇವಿಗೆ ಆಹ್ವಾನ ಕೊಟ್ಟಂಗ. ಮಟ ಮಟ ಮಧ್ಯಾಹ್ನದ ರಣಬಿಸಿಲಿನ ಝಳ ಮನ್ಯಾಗ ಬರಬಾರದು ಅಂತ ಬಾಗಲ ಪರದೆ ಸೈತ ನೀರಾಗ ಹಿಂಡಿ ಹಾಕ್ತಾರ.

ತಣ್ಣಗ ಅಂತನ್ನಿಕ್ರೂ ಝಳ ತಡಿಯುವಲ್ಲಿ, ಹೊಟ್ಟೆಗೆ ತಂಪು ತಣ್ಣಗಿರುವ ಮಜ್ಗಿ ಬಿದ್ ಮ್ಯಾಲೆ ಬಂಡೆ ವರಸುವ ಸಂಭ್ರಮ ಶುರು ಆಗ್ತದ. ಬಿಸಿಲಿನ ತಾಪಕ್ಕ ಕಾಯ್ದ ಬಂಡೆ ವರಸಿ, ಒಣಗುವ ಮೊದಲೇ ಅದರ ಮ್ಯಾಲೆ ಕುಂಡಿಯೂರಿ ಕುಂದ್ರೂದು, ನೆಲಕ್ಕ ಬೆನ್ನು ಹಾಸಿ ಮಲಗೂದೆ ಸುಖ ಅಲ್ಲಿ.

ಎದ್ದ ಮ್ಯಾಲೆ ಒಂದು ಮಸ್ತ್ ಚಾ ಕುಡೀಬೇಕಂದ್ರ ಪಾನಕಕ್ಕ ಚಾಪುಡಿ ಹಾಕಿ ಕುದಿಸಿದ ಚಾ ಸಿಗ್ತದ. ಕಡಕ್ ಚಾಯ್ ಮಾಡಂದ್ರ ಹಾಲು ತುಸು ಕಡಿಮಿ ಹಾಕಿ, ಚಾಪುಡಿ ಸಕ್ರಿ ಸುರವಿಕೊಡ್ತಾರ. ತುಟಿಗೆ ತುಟಿ ಅಂಟೂವಷ್ಟು ಸಿಹಿ ಮಾಡಿದ್ರಷ್ಟೇ ಚಾ ಅದು. ಜಾಂಬಿನಾಗ ಚಾ ಹಾಕ್ಕೊಂಡು, ಕೈಯ್ಯಾಗ ರಸ್ಕ್ ಹಿಡ್ಕೊಂಡು ಕುಂತ್ರಷ್ಟೇ ಚಾ ಕುಡದಂಗ. ಮನಿ ಎರಡೂ ಬದಿಗೆ ಇರುವ ಕಟ್ಟಿ ಮ್ಯಾಲೆ ಚಾ ಹೀರಕೊಂತ ಕುಂತ್ರ ಅಂಗಳದಾಗಿನ ಬೇವಿನಗಿಡ, ಬಾದಾಮಿಗಿಡ ಹೌದೌದು, ಅಲ್ಲಲ್ಲ ಔದೌದು ಅಂತಾವ. ಜೀವನಾನೇ ಅಲ್ಪ ಅನ್ನೂದು ಅರ್ಥ



ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು.
ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್– editorsu@sudha.co.in